**ದಿವಾಣಿ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ಘನ ನ್ಯಾಯಾಲಯ ಬ್ಯಾಡಗಿ.**
**ಕ್ರಿಮಿನಲ್ ಪ್ರಕರಣ ಸಂಖ್ಯೆ: 585/2022**

ಪಿಡಬ್ಲ್ಯೂ: 04
ಸಿಡಬ್ಲ್ಯೂ: 09

ಹೆಸರು : ಮಲ್ಲೇಶಪ್ಪ ರಾಮಪ್ಪ ಲಮಾಣಿ
ವಯಸ್ಸು : 64 ವರ್ಷ
ಉದ್ಯೋಗ : ನಿವೃತ್ತಿ
ವಾಸಸ್ಥಳ : ಬ್ಯಾಡಗಿ

ದಿನಾಂಕ : 13.10.2025 ರಂದು ಸಾಕ್ಷಿಯನ್ನು ಕರೆಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

**ಮುಖ್ಯ ವಿಚಾರಣೆ: ಮಾನ್ಯ ಎಪಿಪಿಯವರಿಂದ :**

6 ನೇ ತಾರೀಖಿನಂದು ನಾವು ಶಿಕಾರಿಪುರಕ್ಕೆ ಚಾಸಾ-01 ರವರ ಬೀಗತನ ಮಾಡಿದ್ದರಿಂದ ಹೋಗಿರುತ್ತೇವೆ. ನಂತರ 8 ನೇ ತಾರೀಖಿಗೆ ಬ್ಯಾಡಗಿಯ ನಮ್ಮ ಮನೆಗೆ ಬಂದಾಗ ಮನೆಯ ಲಾಕ್ ಮುರಿದು ಒಳಗೆ ಹೋಗಿ ಟ್ರೆಜರಿ ಕಿಲಿ ತೆಗೆದು ಹರಡಿ ಬಂಗಾರ ತೆಗೆದುಕೊಂಡು ಹೋಗಿರುತ್ತಾರೆ. ಸದರಿ ದಿನ ಬೆಳಿಗ್ಗೆ 7.00 ಘಂಟೆಗೆ ಬಂದಿರುತ್ತೇವೆ. 4 ತೋಲ ತಾಳಿ ಸರ, ಜುಮಕಿ, ಕಿವಿ ಓಲೆ ಇದ್ದವು. ಸದರಿ ಬಂಗಾರ 6 ತೋಲ ಇತ್ತು. ನಂತರ ನನ್ನ ಮಗ ದೂರನ್ನು ಸಲ್ಲಿಸಿದ್ದಾನೆ. ನಾನು ಪೊಲೀಸರಿಗೆ ಹೇಳಿಕೆ ನೀಡಿರುವುದಿಲ್ಲಾ. ಸಾಕ್ಷಿ ಮುಂದುವರೆದು ಪೊಲೀಸರಿಗೆ ಹೇಳಿಕೆ ನೀಡಿದ್ದೆನೆ ಎಂದು ನುಡಿಯುತ್ತಾರೆ. ಆರೋಪಿತನನ್ನು ನೋಡಿ ಗುರುತಿಸಿರುತ್ತಾರೆ.

(ಮಾನ್ಯ ಎಪಿಪಿಯವರ ವಿನಂತಿ ಮೇರೆಗೆ ಈ ಸಾಕ್ಷಿಯನ್ನು ಬಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೇಳಿದ ಮೇರೆಗೆ ಅನುಮತಿಯನ್ನು ನೀಡಲಾಯಿತು).

**<u>ಪಾಟೀ ಸವಾಲು : ಮಾನ್ಯ ಎಪಿಪಿ ಯವರಿಂದ :</u>**

ದಿಃ 06.07.2021 ರಂದು ಮಧ್ಯಾಹ್ನ 3.00 ಘಂಟೆಗೆ ಶಿಕಾರಿಪುರಕ್ಕೆ ಹೋಗಿರುತ್ತೇವೆ ಎಂದರೆ ಸರಿ. ದಿಃ 08.07.2021 ರಂದು ಬ್ಯಾಡಗಿಗೆ ಬೆಳಿಗ್ಗೆ 7.30 ಕ್ಕೆ ಬಂದಿರುತ್ತೇವೆ ಎಂದರೆ ಸರಿ. ಬಂಗಾರ ಸಿಕ್ಕ ಮೇಲೆ ಪೊಲೀಸರು ಕರೆಸಿ ಬಂಗಾರ ತೋರಿಸಿರುತ್ತಾರೆ ಎಂದರೆ ಸರಿ. ಸದರಿ ಬಂಗಾರ ಗುರುತಿಸಿರುತ್ತೇವೆ ಎಂದರೆ ಸರಿ. ನಿಪಿ–13 ರಿಂದ 17 ರಲ್ಲಿ ಇರುವ ಬಂಗಾರದ ಆಭರಣ ನೋಡಿ ಗುರುತಿಸಿರುತ್ತಾರೆ.

**<u>ಪಾಟೀ ಸವಾಲು : ಆರೋಪಿ ಪರ ವಕೀಲರಿಂದ :</u>**

ಆರೋಪಿತನನ್ನು ಇಂದೇ ನೋಡುತ್ತಿದ್ದೇನೆ ಅಂದರೆ ಸರಿ. ಸದರಿ ದಿನ ಮಂಗಳವಾರ 6 ನೇ ತಾರೀಖು ಇರುತ್ತದೆ. ಆದರೆ ತಿಂಗಳು ವರ್ಷ ಗೊತ್ತಿರುವುದಿಲ್ಲಾ. ಪೊಲೀಸರು ಆಭರಣಗಳನ್ನು ಎಲ್ಲಿಂದ ತಂದಿರುತ್ತಾರೆ ಮತ್ತು ಹೇಗೆ ತಂದಿರುತ್ತಾರೆ ಎಂದು ಮಾಹಿತಿ ಇಲ್ಲಾ ಅಂದರೆ ಸರಿ. ಪೊಲೀಸರ ಮುಂದೆ ನಾನು ಸ್ವತಃ ಹೇಳಿಕೆ ನೀಡಿರುವುದಿಲ್ಲಾ. ನಮ್ಮ ಮನೆ ಬಾಗಿಲು ಮುರಿದು ಕಳ್ಳತನ ಮಾಡಿದ ಬಗ್ಗೆ ನನಗೆ ವೈಯಕ್ತಿಕ ಮಾಹಿತಿ ಇಲ್ಲಾ ಅಂದರೆ ಸರಿ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು).

ಓ ಹೆ ಕೆ ಸ ಅದೆ.

Sd/-
ಜೆಎಂಎಫ್‌ಸಿ, ಬ್ಯಾಡಗಿ.